रत्यमेव जयते

ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

4ನೇ ಜನವರಿ 2017

**ಸನ್ಮಾನ್ಯಶ್ರೀ ಸಿದ್ದರಾಮಯ್ಯ ರವರೇ,**

**ವಿಷಯ:** ನಮ್ಮ ಎಲ್ಲಾ ನಾಗರೀಕರ ಸುರಕ್ಷತೆ ನಿಮ್ಮ ಸರ್ಕಾರದ ಕರ್ತವ್ಯ

ನೂತನ ವರ್ಷದ ಸಂಭ್ರಮಾಚರಣೆಯ ಸಂದರ್ಭದಲ್ಲಿ ನಮ್ಮ ಬೆಂಗಳೂರಿನ ಮಹಿಳೆಯರ ಸುರಕ್ಷತೆ ವಿಷಯದಲ್ಲಿ ತಮ್ಮ ಸರ್ಕಾರದ ವೈಫಲ್ಯವನ್ನು ಕುರಿತು ನಾನು ಈ ಪತ್ರ ಬರೆಯುತ್ತಿದ್ದೇನೆ. ಈ ಹಿಂದೆ ಕೂಡ ಪ್ರಮುಖವಾದ, ಮಕ್ಕಳ ಸುರಕ್ಷತೆ ಮತ್ತು ವಿಶೇಷವಾಗಿ ನಗರದ ನಮ್ಮ ಮಕ್ಕಳ ಬಗ್ಗೆ ಹಲವಾರು ಬಾರಿ ಬಿನ್ನವಿಸಿಕೊಂಡಿದ್ದರೂ ತಮ್ಮ ಸರ್ಕಾರ ಏನೂ ಕ್ರಮ ಕೈಗೊಳ್ಳದೆ ಕೈಕಟ್ಟಿ ಕುಳಿತಿದೆ.

ನೂತನ ವರ್ಷದ ಸಂಭ್ರಮಾಚರಣೆಯ ಸಂದರ್ಭದಲ್ಲಿದ್ದ ಸಾಮೂಹಿಕ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಅನೇಕ ಯುವತಿಯರಿಗೆ ರಕ್ಷಣೆ ನೀಡುವಲ್ಲಿ ನಿಮ್ಮ ಸರ್ಕಾರ ವಿಫಲವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಗಾಯದ ಮೇಲೆ ಬರೆ ಎಳೆದಂತೆ, ನಿಮ್ಮ ಸಚಿವರು ಸಂತ್ರಸ್ತರ ನೆರವಿಗೆ ಧಾವಿಸಿ ನ್ಯಾಯ ಒದಗಿಸುವ ಬದಲು ಅವರನ್ನೇ ದೂಷಿಸುವಂತೆ ಅವರು ಧರಿಸಿದ್ದ ಬಟ್ಟೆಗಳು ಮತ್ತಿತರ ವಿಷಯಗಳ ಬಗ್ಗೆ ಹೇಳಿಕೆ ನೀಡಿದ್ದಾರೆ.

ಅದು ಹಾಗಿರಲಿ, ಈ ಸಂದರ್ಭದಲ್ಲಿ ಕೆಲವು ವಾಸ್ತವಾಂಶಗಳನ್ನು ತಮ್ಮ ಮತ್ತು ತಮ್ಮ ಸರ್ಕಾರದ ಗಮನಕ್ಕೆ ತರುವುದು ಅವಶ್ಯಕವಾಗಿದೆ.

ಒಂದು ಸರಳವಾದ ಆದರೆ ಪ್ರಮುಖವಾದ ವಾಸ್ತವತೆಯನ್ನು ಮರೆತಂತೆ ಕಾಣುತ್ತದೆ - ಒಂದು ಚುನಾಯಿತ ಸರ್ಕಾರ, ಅದರ ಸಚಿವರು ಮತ್ತು ಪೊಲೀಸ್ ಇಲಾಖೆ ಎಲ್ಲಾ ನಾಗರೀಕರಿಗೆ ಕಾನೂನು, ಸುವ್ಯವಸ್ಥೆ ಮತ್ತು ರಕ್ಷಣೆ ನೀಡಲು ಬದ್ಧರಾಗಿರಬೇಕು. ಇದೊಂದು ಸಂವಿಧಾನಾತ್ಮಕ ಆದೇಶ ಮತ್ತು ಯಾವುದೇ ಆತ್ಮಗೌರವವುಳ್ಳ ಚುನಾಯಿತ ರಾಜ್ಯ ಸರ್ಕಾರ ತಾನೇ ವಹಿಸಿಕೊಳ್ಳುವ  ಜವಾಬ್ದಾರಿ. ಈ ಹೊಣೆಗಾರಿಕೆಯು ಸುಸ್ಪಷ್ಟವಾಗಿದ್ದು ಪ್ರತಿಯೊಬ್ಬ ಪುರುಷ, ಮಹಿಳೆ, ಮಕ್ಕಳು ಮತ್ತು ಹಿರಿಯರಿಗೆ ಅನ್ವಯಿಸುವಂಥದ್ದು. ಆದರೆ, ಈ ಸರ್ಕಾರದಲ್ಲಿ ಪದೇಪದೇ, ಕರ್ತವ್ಯವನ್ನು ನಿರ್ವಹಿಸುವಲ್ಲಿ ಇಂತಹ ಮರೆವು ಪುನರಾವರ್ತಿತವಾಗುತ್ತಲೇ ಇದೆ.

ಮಾನ್ಯ ಗೃಹಮಂತ್ರಿಗಳಿಗೆ ನಾನು ತುಂಬಾ ಗೌರದದಿಂದ ಹೇಳಬಯಸುವುದೇನೆಂದರೆ, ಸಂವಿಧಾನದಲ್ಲಾಗಲಿ ಅಥವಾ ಈ ನೆಲದ ಕಾನೂನಿನಲ್ಲಾಗಲೀ ತಮ್ಮ ಜವಾಬ್ದಾರಿಯನ್ನು ಕ್ಷೀಣಿಸುವ, ವ್ಯಕ್ತಿಯ ಲಿಂಗ ಅಥವಾ ಧರಿಸಿದ ಬಟ್ಟೆಯ ಆಧಾರದ ಮೇಲೆ ಸುರಕ್ಷತೆ ನೀಡುವ ಪ್ರಸ್ತಾವವಿಲ್ಲ. ಭಾರತ ಸೌದಿ ಅರೇಬಿಯಾ ಅಲ್ಲ ಮತ್ತು ಅಲ್ಲಿನ ಒಂದು ನಗರವೂ ಅಲ್ಲ. ಅದು ಎಲ್ಲಾ ಪ್ರಜೆಗಳಿಗೆ ಸಮಾನ ಹಕ್ಕನ್ನು ನೀಡುವ ಸಂವಿಧಾನಾತ್ಮಕ ಪ್ರಜಾಪ್ರಭುತ್ವದ ಭಾಗವಾಗಿದೆ.

11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

सत्यमेव जयते

ತಮಗೆ ತಿಳಿದಿರುವಂತೆ, ಅನೇಕ ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಗಾಗಿ ನಾನು ದೀರ್ಘಕಾಲದಿಂದ ಹೋರಾಡುತ್ತಲೇ ಬಂದಿದ್ದೇನೆ. ಅದು ಅಭಿವ್ಯಕ್ತಿ ಸ್ವಾತಂತ್ರ್ಯವಿರಲಿ ಅಥವಾ ಸಶಸ್ತ್ರ ಸೇನಾಪಡೆಗಳ ಮತದಾನದ ಹಕ್ಕುಗಳೇ ಇರಲಿ, ಅವುಗಳಿಗಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ನಾನು ಹೋರಾಡುತ್ತಲೇ ಬಂದಿದ್ದೇನೆ. ಇತ್ತೀಚಿನ ಈ ಘಟನೆ, ಮಹಿಳೆಯರ ಸುರಕ್ಷತೆಯ ಹಕ್ಕನ್ನು ಕಸಿಯುವ ಮತ್ತೊಂದು ಪ್ರಯತ್ನವಾಗಿದೆ.

ನಮ್ಮ ಸಂವಿಧಾನಕರ್ತೃಗಳು, ಸಮಾನತೆಯ ಹಕ್ಕನ್ನು ಸಂವಿಧಾನಬದ್ಧಗೊಳಿಸುವಾಗ, ಮಕ್ಕಳು ಮತ್ತು ಮಹಿಳೆಯರಿಗೆ ವಿಶೇಷ ಪರಿಗಣಗೆ ನೀಡಬೇಕಾದ ಅವಶ್ಯಕತೆ ಮನಗಂಡು ಮತ್ತು ಈ ವಿಷಯದಲ್ಲಿ ರಕ್ಷಣಾತ್ಮಕ ವಿವೇಚನೆ ಮತ್ತು ಸಕಾರಾತ್ಮಕ ಪೂರಕ ಕ್ರಮಗಳನ್ನು ಸಂವಿಧಾನದ 15ನೇ ಪರಿಚ್ಛೇದದ (3)ನೇ ಕಲಂನಲ್ಲಿ ಸೇರಿಸಿದ್ದಾರೆ.

1992ರ 1 ಎಸ್.ಸಿ.ಸಿ. 558ರ ದೆಹಲಿ ವಿಶ್ವವಿದ್ಯಾಲಯ ವರ್ಸಸ್ ಸಂತ ಸ್ಟೀಫನ್ ಕಾಲೇಜು ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನಾತ್ಮಕ ಪೀಠವು ಪರಿಚ್ಛೇದ 15(3)ನ್ನು ವ್ಯಾಖ್ಯಾನಿಸುವಾಗ ಹೀಗೆ ಹೇಳಿದೆ:

ಅಸಮಾನತೆ ಅಂದರೆ ತುಲನಾತ್ಮಕ ಸಮಾನತೆಯು, ವಾಸ್ತವದಲ್ಲಿ ಸಮಾನವಾದುದನ್ನು ಸಮಾನವಾಗಿಯೂ ಅಸಮಾನವಾದುದನ್ನು ಅಸಮಾನವಾಗಿಯೂ ಕಾಣುವುದೇ ಆಗಿದೆ. ಅಸಮಾನರಾದವರನ್ನು ಅವರ ಅಸಮಾನತೆಗೆ ಅನುಗುಣವಾಗಿ ವಿಭಿನ್ನವಾಗಿ ಪರಿಗಣಿಸಲು ಅವಕಾಶವಿರುವುದಷ್ಟೇ ಅಲ್ಲದೇ ಅವಶ್ಯಕವೂ ಕೂಡ ಆಗಿದೆ.

ದೆಹಲಿಯ ನಿರ್ಭಯ ಹತ್ಯಾಕಾಂಡದ ನಂತರ, ಹೊಸ ಹೊಸ ಅಪರಾಧಗಳಿಗೆ ತಕ್ಕ ದಂಡನೆಯನ್ನು ವಿಧಿಸಲು ಅನುವಾಗುವಂತೆ ಭಾರತೀಯ ದಂಡ ಸಂಹಿತೆಗೆ ತಿದ್ದುಪಡಿ ತರಲು ಅಪರಾಧ ಕಾನೂನು (ತಿದ್ದುಪಡಿ) ಕಾಯ್ದೆ, 2013ನ್ನು ರೂಪಿಸಲಾಯಿತು. ಸೆಕ್ಷನ್ 354 (ಮಹಿಳೆಯರ ಚಾರಿತ್ರ್ಯಕ್ಕೆ ಬಲಪ್ರಯೋಗದಿಂದ ಅಥವಾ ಉದ್ದೇಶಪೂರ್ವಕವಾಗಿ ಧಕ್ಕೆವುಂಟು ಮಾಡುದ ಕೃತ್ಯಗಳಿಗೆ 5 ವರ್ಷಗಳವರೆಗೂ ಕಠಿಣ ಶಿಕ್ಷೆ) ವಿಧಿ ಇದ್ದರೂ ಇನ್ನನೇಕ ಹೊಸ ಪರಿಚ್ಛೇದಗಳನ್ನು ಸೇರಿಸಲಾಯಿತು. ಅವುಗಳೆಂದರೆ:

ಸೆಕ್ಷನ್ 354ಎ: ಲೈಂಗಿಕ ದೌರ್ಜನ್ಯ - ದೈಹಿಕವಾಗಿ ಮುಟ್ಟುವುದು ಅಥವಾ ಇನ್ನೂ ಮುಂದುವರೆದು ಪ್ರತಿರೋಧವನ್ನು ಹತ್ತಿಕ್ಕಿ ಉದ್ದೇಶಪೂರ್ವಕವಾಗಿ ಲೈಂಗಿಕ ನಟವಳಿಕೆಗಳಿಗೆ 3 ವರ್ಷಗಳವರೆಗೆ ಸೆರೆವಾಸ ಶಿಕ್ಷೆ.

ಸೆಕ್ಷನ್ 354ಬಿ: ಮಹಿಳೆಯರ ಮೇಲೆ ಆಕ್ರಮಣ ಅಥವಾ ಬಲಪ್ರಯೋಗದ ಮೂಲಕ ವಿವಸ್ತ್ರಗೊಳಿಸುವ ಅಪರಾಧಕ್ಕೆ 7 ವರ್ಷಗಳವರೆಗೂ ಕಾರಾಗೃಹವಾಸ ಶಿಕ್ಷೆ.

ಸೆಕ್ಷನ್ 354ಡಿ: ಹಿಂಬಾಲಿಸುವುದು - 3 ವರ್ಷಗಳವರೆಗೂ ಸೆರೆವಾಸ ಶಿಕ್ಷೆ.

ಸೆಕ್ಷನ್ 268 ಐಪಿಸಿ: ಸಾರ್ವಜನಿಕವಾಗಿ ಕಿರಿಯುಂಟು ಮಾಡುವ ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ಜನರಿಗೆ ತೊಂದರೆ ನೀಡುವ ಅಪರಾಧಗಳಿಗೆ ಶಿಕ್ಷೆ ನಿಗದಿಪಡಿಸಿದೆ.

ಇಲ್ಲಿ ಉಲ್ಲೇಖಿಸಿರುವ ತಿದ್ದುಪಡಿ ಮತ್ತು ಸೇರ್ಪಡೆಗಳು ಪರಿಚ್ಛೇದ 15(3) ರಿಂದ ಸಂರಕ್ಷಿಸಲ್ಪಟ್ಟಿದೆ. ಆ ಮೂಲಕ ಅವುಗಳಿಗೆ ಸಂವಿಧಾನಾತ್ಮಕ ನಿರ್ದೇಶವನ್ನು ಒದಗಿಸಿ, ಪುರುಷರಿಗಿಂತ ಹೆಚ್ಚಿನ ವಿವೇಚನೆಯನ್ನು ಒಪ್ಪುತ್ತದೆ. ಆದ್ದರಿಂದ, ಸಕಾರಾತ್ಮಕವಾದ ಮತ್ತು ಮಹಿಳೆಯರ ಪರವಾದ ರಕ್ಷಣಾತ್ಮಕ ವಿವೇಚನೆಗಳನ್ನು ನಿರ್ದಿಷ್ಟವಾಗಿ ಬಳಸಿಕೊಂಡು ಕಾನೂನಿನಡಿಯಲ್ಲಿರುವ ಇಂತಹ ಎಲ್ಲಾ ಅವಕಾಶಗಳನ್ನು ಬಳಸಿಕೊಂಡು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು ರಾಜ್ಯ ಸರ್ಕಾರಗಳಿಗೆ ಇನ್ನೂ ಹೆಚ್ಚಿನ ಪ್ರಮುಖ ಆದ್ಯತೆಯಾಗಿರಬೇಕಾಗಿದೆ.

ಆತ್ಮೀಯ ಮುಖ್ಯಮಂತ್ರಿಗಳೇ, ಹೊಸ ವರ್ಷದ ಮುನ್ನಾದಿನದಂದು ನಮ್ಮ ನಗರದ ಯುವತಿಯರ ಮೇಲೆ ಅಪರಾಧಗಳು ನಡೆದಿವೆ. ತಮ್ಮಲ್ಲಿ ನನ್ನ ಗೌರವಪೂರ್ವಕ ನಿವೇದನೆಯೆಂದರೆ, ನಿಮ್ಮ ಸರ್ಕಾರದ ಅಂತಿಮ ವರ್ಷದಲ್ಲಾದರೂ ನಿಮ್ಮನ್ನು ಮತ್ತು ನಿಮ್ಮ ಸರ್ಕಾರವನ್ನು ಪುನ: ಆವಿಷ್ಕರಿಸಿಕೊಳ್ಳಿ. ಈ ಅಪರಾಧಗಳ ತನಿಖೆ ನಡೆಸಿ, ತಪ್ಪಿಸ್ಥರನ್ನು ಶಿಕ್ಷಿಸಿ, ಮಹಿಳೆಯರಿಗೆ ಬೆಂಗಳೂರಿನ ತಮ್ಮ ಮನೆಗಳಲ್ಲಿ ತಾವು ಸುರಕ್ಷಿತರಾಗಿದ್ದೇವೆ ಎಂಬ ಭಾವನೆ ಮೂಡಿಸಿ.

ತಮ್ಮ ವಿಶ್ವಾಸಿ,

ರಾಜೀವ್ ಚಂದ್ರಶೇಖರ್

**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಬೆಂಗಳೂರು